**ಸಿ.ಸಿ.ನಂ.:** 35/2025

ಪಿ.ಡಬ್ಲ್ಯೂ:1

(ಇಂದು ದಿನಾಂಕಃ **06-09-2025** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲು – ಆರೋಪಿ ಪರ ಶ್ರೀ. ಎಮ್.ಜಿ.ಎಸ್. ವಕೀಲರಿಂದ**

1. ಆರೋಪಿತ ಹಾಗೂ ಈ ಪ್ರಕರಣದ ಜಾಮೀನುದಾರ ಹಾಗೂ ಸಾಲಗರರ ವಿರುದ್ಧ ಪಂಚಾಯಿತಿ ದಾವಾವನ್ನು ದಾಖಲಿಸಿರುತ್ತೇನೆ. ಸದ್ರಿ ಪಂಚಾಯತಿ ದಾವಾದಲ್ಲಿ ಆದ ಅವಾರ್ಡನಂತೆ ಈ ನ್ಯಾಯಾಲಯದಲ್ಲಿ ದರಖಾಸ್ತು ಪ್ರಕರಣ ದಾಖಲಾಗಿರುವ ಕುರಿತಾಗಿ ನನಗೆ ನೆನಪಿಗೆ ಬರುತ್ತಿಲ್ಲ. Execution No. 34/24 ಈ ಪ್ರಕರಣದ ಆರೋಪಿತ ಹಾಗೂ ಜಾಮೀನುದಾರರು ಹಾಗೂ ಸಾಲಗಾರರ ವಿರುದ್ಧ ದಾಖಲಿಸಿರುತ್ತೇನೆ ಎಂದರೆ ಸರಿ. ಸದ್ರಿ ಪ್ರಕರಣವು ದಿಃ 19/04/2024 ರಂದು ಮುಕ್ತಾಯಗೊಳಿಸಿರುತ್ತೇವೆ ಎಂದರೆ ಸರಿಯಲ್ಲ.

**2.** ಗಣೇಶ ಜಟ್ಟಿ ಹನೇಹಳ್ಳಿ ಈ ಪ್ರಕರಣಕ್ಕೆ ಸಂಬಂಧಿಸಿದ ಒಂದೇ ಸಾಲವನ್ನು ಪಡೆದುಕೊಂಡಿರುತ್ತಾನೆ. ಈ ಪ್ರಕರಣಕ್ಕೆ ಸಂಭಂಧಿಸಿದಂತೆ ಅತನ ವಿರುದ್ಧ ಚೆಕ್ ಪ್ರಕರಣ ದಾಖಲುಗೊಂಡು ಆತನಿಗೆ ಶಿಕ್ಷೆ ಆಗಿರುತ್ತದೆ ಎಂದರೆ ಸರಿ. ಸದ್ರಿ ಶಿಕ್ಷೆಯ ವಿರುದ್ಧ ಆತನು ಮೇಲ್ಮನವಿ ಸಲ್ಲಿಸಿರುತ್ತಾನೆ ಎಂದರೆ ಸರಿ. ಈ ಪ್ರಕರಣವನ್ನು ದಾಖಲಿಸುವ ಸಂದರ್ಭದಲ್ಲಿ ಈ ಪ್ರಕರಣದ ಸಾಲಗಾರನಾದ ಗಣೇಶ ಜಟ್ಟಿ ಹನೇಹಳ್ಳಿ ಇತನ ವಿರುದ್ದ ಈ ಪ್ರಕರಣದ ಸಾಲಕ್ಕೆ ಸಂಬಂಧಿಸಿದಂತೆಯೇ ಚೆಕ್ ಅಮಾನ್ಯ ಪ್ರಕರಣ ವಿಚಾರಣೆಯಲ್ಲಿ ಬಾಕಿ ಇತ್ತು ಎಂದರೆ ನನಗೆ

ಈಗ ನೆನಪಿಗೆ ಬರುತ್ತಿಲ್ಲ ಎಂದು ನುಡಿಯುತ್ತಾರೆ. ಗಣೇಶ ಜಟ್ಟಿ ಹನೇಹಳ್ಳಿ ಇತನ ವಿರುದ್ಧ ದಿಃ 25/01/2023 ರಂದು ಫಿರ್ಯಾದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಸದ್ರಿ ಪ್ರಕರಣವು ದಿಃ 13/11/2024 ರಂದು ಆತನಿಗೆ ಶಿಕ್ಷೆಯೊಂದಿಗೆ ಮುಕ್ತಾಯಗೊಂಡಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಸದ್ರಿ ಪ್ರಕರಣದ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿರುತ್ತಾನೆ. C.C.No.235/2023 ಬಾಕಿ ಇರುವ ಕುರಿತಾಗಿ ಈ ಪ್ರಕರಣದ ಫಿರ್ಯಾದಿಯಲ್ಲಿ ಹಾಗೂ ನಿಪಿ 4 ರಲ್ಲಿ ನಮೂದಿಸಿಲ್ಲ ಎಂದರೆ ಸರಿ.

3. ಈ ಪ್ರಕರಣದ ಸಾಲಕ್ಕೆ ಸಂಬಂಧಿಸಿದಂತೆ .C.C.No.235/2023 ರ ಆರೋಪಿತನ ಚೆಕ್ ನಮ್ಮ ಬಳಿ ಇರಲಿಲ್ಲ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆ.ಪ್ರ.ದ.ನ್ಯಾ.ದಂ. ಕುಮಟಾ